ದಿನಾಂಕಃ 17-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **2** ನೇ ಎದುರುದಾರರ ಪರವಾಗಿ ಶ್ರೀ ಕೆ.ಎಂ.ಜೆ. ವಕೀಲರಿಂದಃ -</u>

4. ಸರ್ವೆ ನಂಬರು.42/1 ಖುಷ್ಕಿ ಜಮೀನು ಭೂಸ್ವಾಧೀನಗೊಂಡಿದೆ ಎಂದರೆ ಸರಿ. ಆ ಸಂಬಂಧ ಪರಿಹಾರ ಸಂದಾಯವಾಗಿದ್ದು ಅದು ಉತ್ತಮವಾದ ಪರಿಹಾರ ಎಂದರೆ ಸರಿಯಲ್ಲ. ಪರಿಹಾರವನ್ನು ತಕರಾರಿಗೆ ಒಳಪಟ್ಟು ನಾನು ಪಡೆದುಕೊಂಡಿಲ್ಲ ಎಂದರೆ ಸರಿ. ಆದಾಗ್ಯೂ ನಾನು ತಕಾರರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಉತ್ತಮ ಬೆಲೆ ಬಾಳುತ್ತದೆ ಎಂದು ತೋರಿಸುವ ಸಲುವಾಗಿ ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ಜಮೀನಿನಲ್ಲಿ ಅಡಿಕೆ ಮತ್ತು ತೆಂಗು ಬೆಳೆ ಬೆಳೆಯುತ್ತಿದ್ದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಜಮೀನು ಖುಷ್ಕಿ ಎಂದರೆ ಅಡಿಕೆ ಮತ್ತು ತೆಂಗು ಬೆಳೆ ಬೆಳೆಯುತ್ತಿದ್ದೆ. ಆ ಕುರಿತು ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ಎನ್.ಆರ್.ಪುರ ಹಿರಿಯ ಸಿವಿಲ್ ನ್ಯಾಯಾಧೀಶರರವರ ನ್ಯಾಯಾಲಯ ಎಲ್.ಎ.ಸಿ.ಸಂಃ14/2017 ರಲ್ಲಿ ಮಾಡಿದ ಪರಿಹಾರ ಈ ಪ್ರಕರಣಕ್ಕೆ ಸಂಬಂಧಿಸುವುದಿಲ್ಲ ಮತ್ತು ಈ ಪ್ರಕರಣದ ಅಧಿಸೂಚನೆ ಮತ್ತು ಆ ಪ್ರಕರಣದ ಅಧಿಸೂಚನೆ ಬೇರೆ ಬೇರೆ ಎಂದರೆ ಸರಿಯಲ್ಲ. ಎಂ.ಎಫ್.ಎ.ಸಂಃ 1556/2010 ಕ್ಕೆ ಸಂಬಂಧಪಟ್ಟ ಅಧಿಸೂಚನೆ ಮತ್ತು

ಈ ಪ್ರಕರಣದ ಅಧಿಸೂಚನೆ ಮತ್ತು ಆ ಪ್ರಕರಣದ ಅಧಿಸೂಚನೆ ಬೇರೆ ಬೇರೆ ಎಂದರೆ ಸರಿಯಲ್ಲ. ಎಂ.ಎಸ್.ಎ.91/2013 ರ ಆದೇಶ ಈ ಪ್ರಕರಣಕ್ಕೆ ಸಂಬಂಧಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಅವಲಂಬಿಸಿದ ತೀರ್ಪಿನ ಪ್ರಕರಣಕ್ಕೆ ಸಂಬಂದಪಟ್ಟ ಅಧಿಸೂಚನೆಗಳು ಈ ಪ್ರಕರಣಕ್ಕೆ ಸಂಬಂಧಿಸುವುದಿಲ್ಲ ಎಂದರೆ ಸರಿಯಲ್ಲ.

7. ನಾನು ಪ್ರತಿವರ್ಷ 18-20 ಕ್ವಿಂಟಾಲ್ ಅಡಿಕೆ ಬೆಳೆಯುತ್ತಿದ್ದೆ ಮತ್ತು ಅದನ್ನು ಶಿವಮೊಗ್ಗ ಎ.ಪಿ.ಎಂ.ಸಿ ಯಲ್ಲಿ ಮಾರಾಟ ಮಾಡುತ್ತಿದ್ದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಎ.ಪಿ.ಎಂ.ಸಿ.ಯಲ್ಲಿ ಮಾರಾಟ ಮಾಡಿದ ಕುರಿತು ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ.

8. ನಾನು ಹಾಜರುಪಡಿಸಿದ ಕ್ರಯಪತ್ರ ಈ ಪ್ರಕರಣಕ್ಕೆ ಸಂಬಂಧಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವ ದಾಖಲಾತಿಗಳು ನಮ್ಮ ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

9. ಭೂಸ್ವಾಧೀನಾಧಿಕಾರಿಗಳು ತಾರತಮ್ಯ ಮಾಡಿರುತ್ತಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಜಮೀನು ಮೌಲ್ಯಯುತವಾದ ಜಮೀನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಿಂತ ಹೆಚ್ಚಿನ ಪರಿಹಾರವನ್ನು ಭೂಸ್ವಾಧೀನಾಧಿಕಾರಿಗಳು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ನಾನು ಸಕಾರಣ ತೋರಿಸಿರುವುದಿಲ್ಲ ಮತ್ತು ಆ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಾನೂನಿನಗುಣವಾಗಿ 1 ನೇ ಎದುರುದಾರ ಪರಿಹಾರವನ್ನು ನೀಡಿರುತ್ತಾರೆ ಎಂದರೆ

ಸರಿಯಲ್ಲ.

ಪಾಟೀ ಸವಾಲುಃ **1** ನೇ ಎದುರುದಾರರ ಪರವಾಗಿ ಡಿಜಿಪಿ ರವರಿಂದಃ

10. ಈ ಪ್ರಕರಣ ಅಧಿಸೂಚನೆಯ ಸಂದರ್ಭದಲ್ಲಿ ಉಪ ನೋಂದಣಾಧಿಕಾರಿ ಇವರಲ್ಲಿ ಚಾಲ್ತಿಯಲ್ಲಿದ್ದ ದರದಂತೆ ವೈಜ್ಞಾನಿಕವಾಗಿ ಪರಿಹಾರ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.
(ಉಳಿದಂತೆ 2 ನೇ ಎದುರುದಾರರ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಗಿದೆ).

ಮರು ವಿಚಾರಣೆಃ ಇಲ್ಲ**.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ